ಜಮಖಂಡಿ ನಗರಕ್ಕೆ ಬಂದಿರುವ lift irrigation 100% ready ಇದೆ. ಕೇವಲ ಪೈಪ್ ಲೈನ್ extension ಮಾತ್ರ ಮಾಡಬೇಕಾಗಿದೆ. ಜಮಖಂಡಿಯ ಎತ್ತರದಲ್ಲಿರುವ ಕಟ್ಟೆ ಕೆರೆ ತುಂಬಿಕೊಟ್ಟರೆ, ನೀರಿನ ಮಟ್ಟ ಸಾಕಷ್ಟು ಮೇಲೆ ಬರುತ್ತದೆ. ಜಮಖಂಡಿ ನಗರ ಮಾತ್ರವಲ್ಲ.

ಅಧ್ಯಕ್ಷರು:– ನಾಳೆ ಉತ್ತರ ಕೊಡುತ್ತಾರೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್:– ಹತ್ತಾರು ಹಳ್ಳಿಗಳಲ್ಲಿನ ನೀರಿನ ಮಟ್ಟ ಎತ್ತರಿಸಲಿಕ್ಕೆ ಅವಕಾಶವಾದಂತಾಗಿದೆ. ಹೀಗಾಗಿ ಮಾನ್ಯ ಮಂತ್ರಿಗಳಲ್ಲಿ ನಾನು ಇದಕ್ಕೆ ಮಂಜೂರಾತಿ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ಸನ್ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಕೆರೆ ತುಂಬುವ ಯೋಜನೆಯನ್ನು ಭಾರೀ ನೀರಾವರಿ ಇಲಾಖೆ ಅನುಷ್ಠಾನಗೊಳಿಸಲಾಗುತ್ತಿದೆ. ಆದ್ದರಿಂದ, ಇದನ್ನು ಕೂಡಾ ಅಲ್ಲಿಗೆ ಒಪ್ಪಿಸಿದ್ದೇವೆ. ಅದನ್ನು ಮಾಡಿಸಿಕೊಡುವುದಕ್ಕೆ ನಾನೂ ಕೂಡ ಪ್ರಯತ್ನ ಪಡುತ್ತೇನೆ. ನಾನೂ ಆ ಭಾಗದವನೇ ಆಗಿರುವುದರಿಂದ, ಈ ವಿಷಯ ಕುರಿತು ಮಾನ್ಯ ಶ್ರೀಕಾಂತ್ ಕುಲಕರ್ಣಿಯವರಿಗೆ ಇರುವಷ್ಟೇ ಕಳಕಳಿ ನನಗೂ ಕೂಡ ಇದೆ.

ಅಕ್ರಮ ಸಕ್ರಮ ಸಮಿತಿ

9 (45) ಶ್ರೀ ವಿಶ್ವನಾಥ ಎಸ್.ಆರ್. (ಯಲಹಂಕ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಹಿಂದೆ ಅಕ್ರಮ ಸಾಗುವಳಿ ಜಮೀನುಗಳನ್ನು ಸಕ್ರಮ ಮಾಡಲು ನಮೂನೆ 50 ಹಾಗೂ 53ರಲ್ಲಿ ಅರ್ಜಿ ಹಾಕಿಕೊಳ್ಳಲು ಅವಕಾಶ ನೀಡಿತ್ತು. ಅದರಲ್ಲಿ ಅಧಿಕಾರಿಗಳ ಹಾಗೂ ಅಕ್ರಮ–ಸಕ್ರಮ ಸಮಿತಿ ವಿಳಂಬ ನೀತಿಯಿಂದ ನೂರಾರು ಅರ್ಜಿಗಳು ಇತ್ಯರ್ಥವಾಗದೇ ಇರುವುದರಿಂದ ಈ ಪ್ರಕರಣಗಳನ್ನು ಯಾವಾಗ ಬಗೆಹರಿಸಲಾಗುವುದು;

ಆ) ಯಲಹಂಕ ವಿಧಾನಸಭಾ ಕ್ಷೇತ್ರದಲ್ಲಿ ಈ ರೀತಿ ಬಾಕಿ ಉಳಿದ ಅರ್ಜಿಗಳೆಷ್ಟು (ದಾಸನಪುರ ಹೋಬಳಿ, ಹೆಸರುಘಟ್ಟ ಯಲಹಂಕ ಹೋಬಳಿಗಳು, ಜಾಲಾ ಹೋಬಳಿಗಳ ಪೂರ್ಣ ವಿವರ ನೀಡುವುದು);

ಇ) ಇತ್ತೀಚಿನ ಸರ್ಕಾರಿ ಆದೇಶದಲ್ಲಿ ನಗರ ಪರಿಮಿತಿಯಿಂದ ಈ ಹಿಂದೆ 18 ಕಿ.ಮೀ ನಂತರಬರುವ ಅಕ್ರಮ ಸಾಗುವಳಿ ಜಮೀನುಗಳನ್ನು ಸಕ್ರಮ ಮಾಡುವ ಆದೇಶವನ್ನು ಬದಲಾವಣೆ ಮಾಡಿ 25 ಕಿ.ಮೀ ವರೆಗೆ

ವಿಸ್ತರಿಸುವುದರಿಂದ ಹಳೆ ಪ್ರಕರಣಗಳನ್ನು ಯಾವ ರೀತಿ ಬಗೆಹರಿಸಲಾಗುವುದು ಹಾಗೂ ಯಾವ ರೀತಿ ಪರಿಗಣನೆಗೆ ತೆಗೆದುಕೊಳ್ಳಲಾಗುವುದು;

ಈ) ಸುಮಾರು 30 ರಿಂದ 40 ವರ್ಷಗಳಿಗೂ ಹೆಚ್ಚು ಕಾಲದಿಂದ ಅಕ್ರಮ ಜಮೀನುಗಳನ್ನು ಸಾಗುವಳಿ ಮಾಡುತ್ತಿರುವ ರೈತರಿಗೆ ಈ ಹೊಸ ಆದೇಶದಿಂದ ಅನ್ಯಾಯವಾಗುವುದಿಲ್ಲವೇ?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ಅಕ್ರಮ-ಸಕ್ರಮ ಸಮಿತಿಗಳನ್ನು ಸರ್ಕಾರವು 119 ತಾಲ್ಲೂಕುಗಳಲ್ಲಿ ರಚಿಸಲಾಗಿದ್ದು ಬಾಕಿ ಪ್ರಕರಣಗಳನ್ನು ಈ ಸಮಿತಿಗಳ ಮುಂದೆ ಮಂಡಿಸಿ ಶೀಘ್ರವಾಗಿ ಇತ್ಯರ್ಥಪಡಿಸಲಾಗುವುದು.

ಆ) ಯಲಹಂಕ ವಿಧಾನಸಭಾ ಕ್ಷೇತ್ರದಲ್ಲಿ ಬಾಕಿ ಉಳಿದಿರುವ ಅರ್ಜಿಗಳ ವಿವರ.

ಕ್ರ.ಸಂಖ್ಯೆ		ನಮೂನೆ-50	ನಮೂನೆ-53
1	ದಾಸನಪುರ	43	106
2	ಹೆಸರುಘಟ್ಟ	33	283
3	ಯಲಹಂಕ	-	320
4	ಜಾಲ	374	297
	ಒಟ್ಟು	**450**	**1006**

ಇ) ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 94 ಎ (4) ರನ್ವಯ ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ಸ್ ಕಾಯ್ದೆ 1976ರ ಅಡಿಯಲ್ಲಿನ ಬೆಂಗಳೂರು ನಗರ ಪರಿಮಿತಿಯಿಂದ 18 ಕಿ.ಮೀ. ಅಂತರದಲ್ಲಿನ ಸರ್ಕಾರಿ ಜಮೀನುಗಳಲ್ಲಿನ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಿ ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಯು.ಡಿ.ಡಿ. 92 ಎಮ್.ಎನ್.ವೈ.2006 ದಿ:16.01.2007ರಲ್ಲಿ ವಿಸ್ತರಿಸಿರುವುದರಿಂದ, ಈ ವ್ಯಾಪ್ತಿಯಲ್ಲಿ ಬರುವ ಗೋಮಾಳ ಜಮೀನು ಒಳಗೊಂಡಂತೆ ಸರ್ಕಾರಿ ಜಮೀನುಗಳ ಸಕ್ರಮೀಕರಣ ಕೋರಿ ಸಲ್ಲಿಸಲಾಗಿರುವ ಬಾಕಿ ಅರ್ಜಿಗಳನ್ನು ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 94ಎ (4) ರನ್ವಯ ಪರಿಶೀಲಿಸಿ ಇತ್ಯರ್ಥಪಡಿಸಬೇಕಾಗುತ್ತದೆ.

ಈ) ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94 ಎ ಮತ್ತು ಬಿ ರಡಿಯಲ್ಲಿ ಸದರಿ ಅರ್ಜಿಗಳನ್ನು ತೀರ್ಮಾನ ಕೈಗೊಳ್ಳುವುದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ವಿಶ್ವನಾಥ್.ಎಸ್.ಆರ್:– ಸನ್ಮಾನ್ಯ ಸಭಾಧ್ಯಕ್ಷರೆ, ಬರ ರೈತರು ಯಾರು ಅಕ್ರಮವಾಗಿ ಸರ್ಕಾರಿ ಜಾಗವನ್ನು ಉಳುತ್ತಿದ್ದರೋ, ಅವರು ಅರ್ಜಿ 50 ಅಥವಾ 53ನ್ನು ಕೊಟ್ಟಲ್ಲಿ, ಅದನ್ನು ಸಕ್ರಮ ಮಾಡುವಂಥ ಕಾನೂನನ್ನು ಸರ್ಕಾರ ಈ ಹಿಂದೆ ಜಾರಿಗೆ ತಂದಿತ್ತು. ಇತ್ತೀಚೆಗೆ 2006–07ರಲ್ಲಿ ಒಂದು ಹೊಸ ಕಾನೂನನ್ನು ಜಾರಿಗೆ ತರಲಾಗಿದೆ. ಮೊದಲು ಬಿಎಂಪಿ ಎಂದು ಇತ್ತು. ಬೆಂಗಳೂರು ಮಹಾನಗರ ಪಾಲಿಕೆಯ 18 ಕಿ.ಮೀ. ವ್ಯಾಪ್ತಿಯೊಳಗೆ ಯಾವುದನ್ನು ಸಕ್ರಮ ಮಾಡುವಂತಿರಲಿಲ್ಲ. ಆದರೆ, ನೂತನವಾಗಿ ಬಿಬಿಎಂಪಿ ಬಂದ ನಂತರ 25 ಕಿ.ಮೀ. ವ್ಯಾಪ್ತಿಯೊಳಗೆ ಯಾವುದನ್ನು ಸಕ್ರಮ ಮಾಡುವಂತಿಲ್ಲವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಇದರಿಂದ ನಾವು ಇಡೀ ಬೆಂಗಳೂರು ನಗರ ಜಿಲ್ಲೆಯಲ್ಲಿ ಒಂದೂ ಜಾಗವನ್ನು ಸಹ ಸಕ್ರಮ ಮಾಡಲು ಸಾಧ್ಯವಾಗುತ್ತಿಲ್ಲ. ಜೊತೆಗೆ ಇಡೀ ರಾಜ್ಯದ ಬೇರೆ ಬೇರೆ ನಗರಸಭೆ, ಪುರಸಭೆ ಮತ್ತು ಕಾರ್ಪೋರೇಷನ್‌ಗಳಿಗೂ ಕೂಡ ಈ ಕಾನೂನನ್ನು ಅನ್ವಯಿಸಲಾಗಿದೆ. ಫಾರಂ ನಂ.50, 53ರ ಮೂಲಕ ಬಹಳ ಹಿಂದೆಯೇ ಅರ್ಜಿ ಸಲ್ಲಿಸಲಾಗಿದೆ. ಈ ಹೊಸ ಕಾನೂನನ್ನು ಇದಕ್ಕೆ ಅನ್ವಯಿಸಿದಲ್ಲಿ ಬಹಳಷ್ಟು ಜನ ಬಡವರಿಗೆ ಅನಾನುಕೂಲವಾಗುತ್ತದೆ. ಕೆಲವರು ಹೈಕೋರ್ಟಿಗೆ ಹೋಗಿ, ಒಂದು ತಿಂಗಳು ಅಥವಾ ಎರಡು ತಿಂಗಳೊಳಗಾಗಿ ಇದನ್ನು ಇತ್ಯರ್ಥಪಡಿಸಬೇಕೆಂದು ಆದೇಶವನ್ನು ತೆಗೆದುಕೊಂಡು ಬಂದಿದ್ದಾರೆ. ಹಳೆಯ ಕಾನೂನಿನ ಪ್ರಕಾರವೇ ಇದನ್ನು ಇತ್ಯರ್ಥಪಡಿಸುವ ಬಗ್ಗೆ ಸ್ಪಷ್ಟತೆ ಇಲ್ಲವಾಗಿದೆ. ಮಾನ್ಯ ಕಂದಾಯ ಸಚಿವರು 'ಕಂದಾಯ ಕಾಯ್ದೆಯ ಕಲಂ 94 ಎ(4)ರನ್ವಯ ಪರಿಶೀಲಿಸಿ ಇತ್ಯರ್ಥಪಡಿಸಬೇಕಾಗುತ್ತದೆ' ಎಂದು ಉತ್ತರವನ್ನು ಕೊಟ್ಟಿದ್ದಾರೆ. 'ಇತ್ಯರ್ಥಪಡಿಸಬಹುದು' ಎಂಬ guidelines ಏನಾದರೂ ನಮಗೆ ಕೊಟ್ಟರೆ ಬಹಳಷ್ಟು ಜನರಿಗೆ ಅನುಕೂಲವಾಗುತ್ತದೆ. ಈಗ courtನಲ್ಲಿ contempt ಕೇಸ್ ಹಾಕುತ್ತಿದ್ದಾರೆ. ಆದರೆ, ಕಾನೂನಿನ ಗೊಂದಲದಿಂದ ಇಲ್ಲಿ ನಮಗೆ ಇತ್ಯರ್ಥಪಡಿಸಲು ಸಾಧ್ಯವಾಗುತ್ತಿಲ್ಲ. ಇಂಥ ಪರಿಸ್ಥಿತಿ ಇರುವುದರಿಂದ, ದಯವಿಟ್ಟು ಮಾನ್ಯ ಕಂದಾಯ ಸಚಿವರು ಸ್ಪಷ್ಟವಾದ ಉತ್ತರವನ್ನು ಈ ಬಗ್ಗೆ ಕೊಟ್ಟು, ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಜಿ.ಕರುಣಾಕರ ರೆಡ್ಡಿ:– ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಹೊಸ ಕಾನೂನು ಜಾರಿಗೆ ಬಂದಿದ್ದರಿಂದ ನಾವು ಅರ್ಜಿಗಳನ್ನು

ಇತ್ಯರ್ಥಪಡಿಸಲು ಸಾಧ್ಯವಾಗುತ್ತಿಲ್ಲವೆಂದು ಹೇಳುತ್ತಿದ್ದಾರೆ. 1991ರಲ್ಲಿ ಫಾರಂ 50ರಡಿಯಲ್ಲಿ ಅರ್ಜಿ ಹಾಕಿಕೊಳ್ಳಲು ಜನರಿಗೆ ಅವಕಾಶ ಮಾಡಿಕೊಡಲಾಗಿತ್ತು. ನಂತರ 1999ರಲ್ಲಿ ಫಾರಂ ನಂ.53ರಡಿಯಲ್ಲಿ ಅರ್ಜಿ ಹಾಕಿಕೊಳ್ಳಲು ಮತ್ತೊಮ್ಮೆ ಅವಕಾಶ ನೀಡಲಾಗಿತ್ತು. 2007ರಲ್ಲಿ ಬಿಬಿಎಂಪಿ 25 ಕಿ.ಮೀ. ವ್ಯಾಪ್ತಿಯೊಳಗಿನ ಜಮೀನು ಸಕ್ರಮ ಮಾಡುವಂತಿಲ್ಲ ಎಂದು ಆದೇಶಿಲಾಯಿತು. 1991ರಿಂದ 2007ರವರೆಗೆ 16 ವರ್ಷಗಳ ಸಮಯವಿತ್ತು. ಆ ಸಂದರ್ಭದಲ್ಲಿ ಯಾವುದೇ ಸರ್ಕಾರ ಇರಲಿ, ಯಾರೇ ಎಂ.ಎಲ್.ಎ.ಗಳಾಗಿರಲಿ, ಅವರು ಕಮಿಟಿಯಲ್ಲಿ ಈ ಬಗ್ಗೆ ತೀರ್ಮಾನ ಮಾಡಿ, ಇತ್ಯರ್ಥ ಪಡಿಸಿದ್ದರೆ, ಇವತ್ತು ಈ ಸಮಸ್ಯೆ ಸರ್ಕಾರದವರೆಗೆ ಬರುತ್ತಿರಲಿಲ್ಲ. 1999ರಿಂದ ತೆಗೆದುಕೊಂಡರೂ ಸಹ 7 ವರ್ಷಗಳ ಕಾಲಾವಕಾಶವಿತ್ತು. ಅಂದಿನ ಅಕ್ರಮ-ಸಕ್ರಮ ಕಮಿಟಿಗಳು ಯಾವುವೂ ಇದನ್ನು ಇತ್ಯರ್ಥ ಮಾಡಲು ಮುಂದೆ ಬಂದಿರಲಿಲ್ಲ. ಆದ್ದರಿಂದ, ಈ ಸಮಸ್ಯೆ ಹಾಗೆಯೇ ಉಳಿದಿದೆ, ಇದರ ಬಗ್ಗೆ ನಾವು ಚರ್ಚೆ ಮಾಡಬೇಕಾಗುತ್ತದೆ. ಈ ಬಗ್ಗೆ ಅಧಿಕಾರಿಗಳೊಂದಿಗೆ ಗಂಭೀರವಾಗಿ ಚರ್ಚಿಸಿ, ನಂತರ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಅಧ್ಯಕ್ಷರು:- ಬೇರೆ ಜಿಲ್ಲೆಗಳಲ್ಲಿ 94 (ಎ)(ಬಿ)ರಡಿಯಲ್ಲಿ ಒಂದು ಅವಕಾಶ ಕೊಡಿ. ಇನ್ನೂ ಸಾಕಷ್ಟು ಜನ ಇದ್ದಾರೆ.

ಶ್ರೀ ಕೆ.ಜಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಸುಮಾರು 3000 ಅರ್ಜಿಗಳು ಬಾಕಿ ಇದೆ. ಆ ಅರ್ಜಿಗಳಲ್ಲಿ ಐದು ಕಿ.ಮೀ. ವ್ಯಾಪ್ತಿಯ ಪ್ರದೇಶಗಳಿವೆ. ಈಗ ಹೊಸ amendment ಮಾಡಿರುವುದರಿಂದ ಇನ್ನೂ ದೂರವಾಗುತ್ತದೆ. 1990ರಲ್ಲಿ ಕೊಟ್ಟಿರುವ ಅರ್ಜಿಗಳು ಇಂದಿಗೂ ಕೂಡ ಇತ್ಯರ್ಥವಾಗಿಲ್ಲ. ಬೇರೆ ಬೇರೆ ಕಾರಣಗಳಿಂದಾಗಿ ಹಿಂದೆ ಸಮಿತಿಯನ್ನೇ ರಚಿಸಿರಲಿಲ್ಲ. ಈಗ ಸಮಿತಿಯನ್ನು ರಚಿಸಲಾಗಿದೆ. ಹತ್ತಿರ ಇರುವ ಯಾರಿಗೂ ಸಹ ಬಗರ್ ಹುಕುಂ ಕಮಿಟಿ ಮೂಲಕ ಜಮೀನನ್ನು ನೀಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಹಾಗಾಗಿ ವಿಶ್ವನಾಥ್ ಹೇಳಿದಂತೆ, ಎಲ್ಲರೂ ಕೂಡ ಈಗ ಕೋರ್ಟಿಗೆ ಹೋಗಿ ಅಲ್ಲಿಂದ ನಿರ್ದೇಶನವನ್ನು ತರುತ್ತಾರೆ, ಕೋರ್ಟ್ ಅಲ್ಲಿ ಸ್ಪಷ್ಟವಾದ ನಿರ್ದೇಶನವನ್ನು ಕೊಡುತ್ತಿಲ್ಲ ನೀವು ಬಗರ್ ಹುಕುಂ ಕಮಿಟಿನಲ್ಲಿ ಇತ್ಯರ್ಥ ಮಾಡಿ ಎಂದು ಕೊಡುತ್ತಾರೆ. ಆದರೆ ಸರ್ಕಾರದ ಆದೇಶದ ಪ್ರಕಾರ ನಾವು ಕೊಡುವುದಕ್ಕೆ ಬರುತ್ತಿಲ್ಲ. ದಯಮಾಡಿ ಅದಕ್ಕೆ ಸ್ಪಷ್ಟವಾದ ನಿರ್ದೇಶನವನ್ನು ಕೊಟ್ಟರೆ ಎಲ್ಲಾ ಸದಸ್ಯರಿಗೆ ಈ ಬಗರ್ ಹುಕುಂ ಕಮಿಟಿನಲ್ಲಿ ಇತ್ಯರ್ಥ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಜೆ. ನರಸಿಂಹ ಸ್ವಾಮಿ:– ಮಾನ್ಯ ಅಧ್ಯಕ್ಷರೆ, ಬಹುಶಃ ಎಲ್ಲಾ ತಾಲ್ಲೂಕುಗಳಿಗೆ ಇದು ಅನ್ವಯವಾಗುತ್ತದೆ, ಬೆಂಗಳೂರಿಗೆ ಸಮೀಪವಿರುವ ನಮ್ಮ ದೊಡ್ಡಬಳ್ಳಾಪುರ ತಾಲ್ಲೂಕಿಗೂ ಕೂಡ ಇದು ಅನ್ವಯವಾಗುತ್ತದೆ. ದಯವಿಟ್ಟು, ಕಂದಾಯ ಮಂತ್ರಿಗಳು ಇದಕ್ಕೆ ಸ್ಪಷ್ಟವಾದ ಅನುದಾನವನ್ನು ನೀಡಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಶ್ರೀನಿವಾಸ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳು ಉತ್ತರ ಕೊಟ್ಟಿರುವುದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಸುಮಾರು 30–40 ವರ್ಷಗಳಿಂದ ಬೆಂಗಳೂರು ನಗರ ಸುತ್ತ ಸೇರಿದಂತೆ ತಮ್ಮ ಕ್ಷೇತ್ರದಲ್ಲೂ ತಮಗೆ ಗೊತ್ತಿರುವಂತೆ ಇರಬಹುದು, ಇದರಲ್ಲಿ ಎರಡು ಮೂರು ತರಹ ಮಾಡಿದ್ದರು. ಪುರಸಭೆಯಿಂದ 5 ಕಿ.ಮೀ., ಬೆಂಗಳೂರು ಸೆಂಟರ್ ನಿಂದ 18 ಕಿ.ಮೀ. ಎಂದು ಮಾಡಿದ್ದರು. ಇವತ್ತು ಬಹಳ ವರ್ಷಗಳಿಂದ ಉಳುಮೆ ಮಾಡುತ್ತಿದ್ದಾರೆ, ನೀವು ಬಿಡಿಸುವುದಕ್ಕೂ ಆಗುವುದಿಲ್ಲ. ತಾವು 7 ವರ್ಷ ಸಮಯ ಕೊಟ್ಟರೂ ಅವರು ಅರ್ಜಿ ಹಾಕಲು ಆಗಲಿಲ್ಲ, ಅಂಥವರಿಗೆ ಏನು ಮಾಡುತ್ತೀರಿ? ಅಂಥವರಿಗೆ ನೀವು ಯಾವ ರೀತಿ ರೆಗ್ಯುಲರೈಸ್ ಮಾಡುತ್ತೀರಿ ಎನ್ನುವುದಾದರು ಸ್ಪಷ್ಟವಾಗಿ ಹೇಳಿ ಅವರು 20–25 ವರ್ಷದಿಂದ ಮಾಡುತ್ತಿದ್ದಾರೆ 53 ಹಾಕದೆ ಇರಬಹುದು, ಹೊಸದಾಗಿ 53 ಹಾಕಿ, ಇನ್ನು ಮುಂದಕ್ಕೆ ಹಾಕದಂತೆ ಏನಾದರು ಒಂದು ಕ್ರಮ ತೆಗೆದುಕೊಂಡರೆ ಒಳ್ಳೆಯದು ಎಂದು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಎಸ್.ಆರ್. ವಿಶ್ವನಾಥ್:– 40 ವರ್ಷಗಳಿಂದ ಉಳುಮೆ ಮಾಡುತ್ತಿರುವುದನ್ನು ಇತ್ಯರ್ಥ ಮಾಡುವುದಕ್ಕಾಗದೆ, ಅನುಕೂಲ ಮಾಡಲಾಗದೆ ಯಾರ್ಯಾರು ಈ ಒತ್ತುವರಿ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದಾರೆ, ಅವರ ಮೇಲೆ ಸರ್ಕಾರಿ ಜಾಗದಲ್ಲಿ ನೀವು ಉಳುಮೆ ಮಾಡುತ್ತಿದ್ದೀರೆಂದು ಕ್ರಿಮಿನಲ್ ಕೇಸ್ ಬುಕ್ ಮಾಡುತ್ತಿದ್ದಾರೆ. ಹಿಂದಿನ ಸರ್ಕಾರಗಳು ಬೇರೆ ಬೇರೆ ಕಾರಣಗಳಿಂದ ಕೆಲವರಿಗೆ ಮಂಜೂರಾತಿ ಮಾಡಲಿಲ್ಲ, ಈಗ ನಮ್ಮ ಸರ್ಕಾರ ಬಂದ ಮೇಲೆ ಅವರಿಗೆ ಏನಾದರೂ ಕೊಡಲಿಲ್ಲವೆಂದರೆ, ತಪ್ಪು ಅಭಿಪ್ರಾಯ ಹೋಗುತ್ತದೆ. ಅದೇನು ದೊಡ್ಡ ವಿಚಾರವಲ್ಲ, ನಮ್ಮ ಕಂದಾಯ ಮಂತ್ರಿಗಳು ಮನಸ್ಸು ಮಾಡಿದರೆ ಈ ಸದನದಲ್ಲೇ ಅದಕ್ಕೆ ಒಂದು ನಿಮಿಷದಲ್ಲಿ ತಿದ್ದುಪಡಿಯನ್ನು ಮಾಡಿಸಬಹುದು. ದಯವಿಟ್ಟು ಈ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಟ್ಟರೆ, ನಾವು ಆ ಸಮಿತಿಗಳಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಸ್. ಮುನಿರಾಜು:– ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರ ಜಿಲ್ಲೆಗೆ ಇದು ಬಹಳ ಪ್ರಮುಖವಾದ ವಿಷಯ. ಹಿಂದೆ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 70 ಸದಸ್ಯರಿದ್ದರು, ನಂತರ 100 ಸದಸ್ಯರಾದರು, ಇವತ್ತು ಬೃಹತ್ ಬೆಂಗಳೂರು ಮಹಾನಗರಪಾಲಿಕೆಯಾಗಿ ವಿಸ್ತರಣೆಯ 198 ಸದಸ್ಯರಿದ್ದಾರೆ. ಮೊದಲು ಬೆಂಗಳುರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 18 ಕಿ.ಮೀ. ಎಂದು ನಿಗದಿ ಮಾಡಲಾಗಿತ್ತು. ಇವತ್ತು ನಿಗದಿ ಮಾಡಿರುವುದು 25 ಕಿ.ಮೀ. ಎಂದು, ಸುಮಾರು 30–40 ವರ್ಷಗಳಿಂದ ರೈತರು ಸರ್ಕಾರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದರು. ಹಿಂದಿನ ಸರ್ಕಾರ ರೈತರ ಮೇಲೆ ಅನೇಕ ಕ್ರಿಮಿನಲ್ ಮೊಕದ್ದಮೆ ಹೂಡಿ, ಕೆಲವು ಭೂಮಿಯನ್ನು ಹರಾಜು ಕೂಡ ಮಾಡಿದರು, ಇವತ್ತು ರೈತರು ನ್ಯಾಯಾಲಯಕ್ಕೆ ಹೋಗಿ ಕಾನೂನು ರೀತಿ ಮಂಜೂರು ಮಾಡಿ ಕೊಡಿ ಎಂದು ನಿರ್ದೇಶನವನ್ನು ತಂದಿದ್ದಾರೆ. ಕಾನೂನಿನಲ್ಲಿ ಬಹಳ ಅಡೆತಡೆಗಳು ಬರುತ್ತಿವೆ, ಆದುದರಿಂದ ವಿಶೇಷವಾಗಿ ಬೆಂಗಳೂರು ನಗರ ಜಿಲ್ಲೆಗೆ ಏನಾದರೂ ಒಂದು ಹೊಸ ರೂಪ ರೂಪಿಸಿ, ಹೊಸದಾಗಿ ಅರ್ಜಿ ಹಾಕಿದವರಿಗೆ ಕೇಳುತ್ತಿಲ್ಲ, ಹಿಂದೆ ಅರ್ಜಿ ಹಾಕಿದವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಕಂದಾಯ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಹೊಸ ರೀತಿಯ ಸಮಸ್ಯೆ ಇದೆ, ಈಗ ನಾವು 53ಕ್ಕೆ ಸಂಬಂಧಿಸಿದಂತೆ ಕಮಿಟಿಯಲ್ಲಿ ಮಂಜೂರು ಮಾಡಿದ್ದೇವೆ. ಆದರೆ **Deemed forest** ಎಂದು ಸಾಗುವಳಿ ಚೀಟಿಯನ್ನು ಕೊಡುತ್ತಿಲ್ಲ. ಸಾಗುವಳಿ ಮಾಡುತ್ತಿದ್ದಾರೆ, ಅವರ ಪೊಸಿಷನ್‌ನಲ್ಲೇ ಇದೆ, ಆದರೆ **deemed forest** ಎಂದು ಫಾರೆಸ್ಟ್ ಅಧಿಕಾರಿಗಳು ಸುಪ್ರೀಂ ಕೋರ್ಟಿಗೆ ಫೈಲ್ ಮಾಡಿದ್ದಾರಂತೆ, ಫೈಲ್ ಮಾಡುವುದಕ್ಕಿಂತ ಮುಂಚೆ ಸಾಗುವಳಿ ಮಾಡುತ್ತಿದ್ದಾರೊ ಇಲ್ಲವೊ ಎಂದು ಸರ್ವೆ ಮಾಡದೇ ಏಕಪಕ್ಷೀಯವಾಗಿ ಫೈಲ್ ಮಾಡಿದ್ದಾರೆ. ಏಕಪಕ್ಷೀಯವಾಗಿ ಫೈಲ್ ಮಾಡಿರುವುದರಿಂದ ಅದು **deemed forest** ಎಂದು ನಾವು ಸಾಗುವಳಿ ಚೀಟಿಯನ್ನು ನಾವು ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಿದ್ದಾರೆ. ಹಾಗಾಗಿ ನಾವು ಕಮಿಟಿಯಲ್ಲಿ ಪಾಸ್ ಮಾಡಿದ್ದರು ಕೂಡ ಅವರನ್ನು ತ್ರಿಶಂಕು ಸ್ಥಿತಿಯಲ್ಲಿಟ್ಟಂತಾಗಿದೆ, ಅದಕ್ಕೆ ಪರಿಹಾರ ರೂಪಿಸಬೇಕಾದಂತಹ ಅವಶ್ಯಕತೆ ಇದೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆಪಡುವುದೇನೆಂದರೆ, 94 (c) ಗೆ ತಿದ್ದುಪಡಿ

ತರುತ್ತೀರಾ? ಇನ್ನೊಂದು ಸಾರಿ ಫಾರಂ 50,53ಕ್ಕೆ ಅವಕಾಶ ಕೊಡುತ್ತೀರಾ? ಎರಡನೆ ಪ್ರಶ್ನೆ, ಸಿ ಅಂಡ್ ಡಿ ಲ್ಯಾಂಡ್ ಎಂದು ಇವತ್ತು ನಮ್ಮಲ್ಲಿ ಒತ್ತುವರಿ ಫಾರಂ ಹಾಕಿ ಕಲ್ಪಿವೇಷನ್‌ನಲ್ಲಿ ರೈತರೇ ಇದ್ದರು ಕೂಡ, ಇವತ್ತು ಅದು ಅರಣ್ಯವೆಂದು ಹೇಳಿ ಪಟ್ಟಾ ಕೊಡದಿರುವಂಥ ವ್ಯವಸ್ಥೆ ಇದೆ, ಅದಕ್ಕೆ ಯಾವಾಗ ತಿದ್ದುಪಡಿ ತರುತ್ತೀರಿ? ಸಿ ಅಂಡ್ ಡಿ ಲ್ಯಾಂಡ್ ಎಂದರೆ ಕಲ್ಪಿವೇಷನ್‌ಗೆ ಬಾರದಿರುವ ಜಾಗವೆನ್ನುತ್ತಿದ್ದರು. ಆದರೆ 1999ರಲ್ಲಿ ಏನು ಮಾಡಿದ್ದಾರೆಂದರೆ, ನಮ್ಮ ಕಂದಾಯ ಇಲಾಖೆಯಲ್ಲಿದ್ದಂಥ ಆ ಎಲ್ಲಾ ಜಾಗವನ್ನು ಆವತ್ತು ಲ್ಯಾಂಡ್ ಬ್ಯಾಂಕಿಗೆ ವರ್ಗಾಯಿಸಿದ್ದರಿಂದ ಇವತ್ತು ಆರ್.ಟಿ.ಸಿನಲ್ಲಿ ಅರಣ್ಯವೆಂದು ನಮೂದು ಮಾಡಿದ್ದಾರೆ. ಆದುದರಿಂದ ಯಾವುದೇ ಸಂದರ್ಭದಲ್ಲಿ ನಮಗೆ ಸಿ ಅಂಡ್ ಡಿ ಲ್ಯಾಂಡ್ ಅನ್ನು ಮಂಜೂರು ಮಾಡುವುದಕ್ಕಾಗುವುದಿಲ್ಲ. ಆದುದರಿಂದ ದಯವಿಟ್ಟು, ಮೊದಲು ನಮ್ಮ ಕಂದಾಯ ಇಲಾಖೆಯಲ್ಲಿ ಯಾವ ರೀತಿ ಈ ಸಿ ಅಂಡ್ ಡಿ ಲ್ಯಾಂಡ್ ಇತ್ತು, ಅದು ಲ್ಯಾಂಡ್ ಬ್ಯಾಂಕಿಗೆ ವರ್ಗವಾಗಿದ್ದು, ಅಲ್ಲಿಂದ withdraw ಮಾಡಿಕೊಂಡು ನಮಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಜಿ. ಕರುಣಾಕರ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಯಲಹಂಕ ಸೇರಿದಂತೆ ಬೆಂಗಳೂರಿನ ಕೆಲವು ಭಾಗಗಳಿಗೆ ಮಾತ್ರ ಸೀಮಿತವಾಗಿದೆ, ಮಾನ್ಯ ಸದಸ್ಯರಾದ ಅಪ್ಪಚ್ಚು ರಂಜನ್ ಸೇರಿದಂತೆ ಇತರೆ ಸದಸ್ಯರು, ಅರಣ್ಯ ಇಲಾಖೆಗೆ ವರ್ಗಾಯಿಸಿರುವ ಸಿ ಅಂಡ್ ಡಿ ಲ್ಯಾಂಡ್ ಅನ್ನು ಲ್ಯಾಂಡ್ ಬ್ಯಾಂಕಿನಿಂದ ವಾಪಸ್ ಕಂದಾಯ ಇಲಾಖೆಗೆ ತೆಗೆದುಕೊಳ್ಳಬೇಕೆಂದು ಹೇಳಿದರು ಮತ್ತು 94 (c) extension ಬಗ್ಗೆ ತಮ್ಮದು ಮಾನ್ಯ ಸದಸ್ಯರದ್ದು ಆತಂಕ ಇದೆ. ಮಾನ್ಯ ರವಿಯವರದ್ದು ಅರಣ್ಯ ವಿಚಾರವೇ ಇದೆ. ಈ ಬಗ್ಗೆ ಬಹಳಷ್ಟು ಸಾರಿ ಹೇಳಿದ್ದೆ, ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಕಂದಾಯ, ಅರಣ್ಯ ಮತ್ತು ಕಾನೂನು ಇಲಾಖೆಗಳ ಸಚಿವರು ಮತ್ತು ಅಧಿಕಾರಿಗಳ ಜೊತೆಯಲ್ಲಿ ಒಂದು ಸಭೆಯನ್ನು ಮಾಡಬೇಕಾಗುತ್ತದೆ. ಬಹಳ ಗಂಭೀರವಾಗಿ ಸಿ ಅಂಡ್ ಡಿ ಲ್ಯಾಂಡ್ ಬಗ್ಗೆ ಚರ್ಚೆ ಮಾಡಿ ಮೇಲೆ ತಿಳಿಸಿದ ಮೂರು ಇಲಾಖೆಗಳ ಸಲಹೆ ಏನು ಬರುತ್ತದೆಯೊ ಅದನ್ನು ನೋಡಿಕೊಂಡು ಒಂದು ತೀರ್ಮಾನ ಮಾಡುತ್ತೇವೆ. ಬೆಂಗಳೂರು ನಗರ ವಿಚಾರದಲ್ಲಿ ಮಾನ್ಯ ಸದಸ್ಯರು ಬಹಳಷ್ಟು ಒತ್ತಡ ಹಾಕುತ್ತಿದ್ದಾರೆ. ಇವತ್ತು ತಮಗೆಲ್ಲಾ ಗೊತ್ತಿರುವಂತೆ ಬೆಂಗಳೂರು ನಗರ ಇವತ್ತು ಬಿಬಿಎಂಪಿಯಾಗಿದೆ, ಇದರ ವ್ಯಾಪ್ತಿ ಕೂಡ ಬಹಳಷ್ಟು ವಿಸ್ತಾರವಾಗಿದೆ. ಬೆಂಗಳೂರಿನಲ್ಲಿ ಬಹಳ ಒಳ್ಳೆಯ ವಾತಾವರಣವಿದೆ ಎಂದು ದೇಶದ ಎಲ್ಲಾ ಮೂಲೆಗಳಿಂದ ಇವತ್ತು ನಮ್ಮ ಬೆಂಗಳೂರಿಗೆ ಬರುತ್ತಿದ್ದಾರೆ, ಇದರಿಂದ

ಮೂಲಭೂತ ಸೌಕರ್ಯವನ್ನು ಒದಗಿಸಲು ಸರ್ಕಾರ ಬಹಳಷ್ಟು ವೆಚ್ಚ ಮಾಡಬೇಕಾಗುತ್ತದೆ. ಈ ಬಗ್ಗೆ ಎಲ್ಲಾ ಆಗು ಹೋಗುಗಳ ಬಗ್ಗೆ ಕಾನೂನು ಇಲಾಖೆಯ ಜೊತೆ ಚರ್ಚೆ ಮಾಡಿ, ಪರಿಶೀಲನೆ ಮಾಡಿ, ತಾವುಗಳೇನು ತಮ್ಮ ಭಾವನೆಗಳನ್ನು ವ್ಯಕ್ತ ಮಾಡಿದ್ದೀರಿ ಅದೆಲ್ಲಾ ಗೊತ್ತಾಗುತ್ತದೆ. ನಾನು ಹೇಳಿದಂತೆ, ಈ ಹಿಂದೆಯೇ ಅವರು ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. 16–17 ವರ್ಷಗಳ ಕಾಲಾವಕಾಶವಿದ್ದರೂ ತೆಗೆದುಕೊಂಡಿಲ್ಲ. ಆದುದರಿಂದ ಮುಂದೆ ಅದನ್ನು ಯಾವರೀತಿ ಇತ್ಯರ್ಥ ಮಾಡಬಹುದೆಂಬುದನ್ನು ಚರ್ಚೆ ಮಾಡಿ ಮತ್ತೆ ನಾನು ತಿಳಿಸುತ್ತೇನೆ.

ಅಧ್ಯಕ್ಷರು: ಆದಷ್ಟು ಬೇಗ ಸಭೆ ಕರೆಯಿರಿ, ಕಾನೂನಿಗೆ ವಿರೋಧವಾಗಿ ಸಿ ಅಂಡ್ ಡಿ ಲ್ಯಾಂಡ್ ಅನ್ನು ಲ್ಯಾಂಡ್ ಬ್ಯಾಂಕಿಗೆ ಕೊಡುವಾಗ ರೆವಿನ್ಯೂನಿಂದ ವರ್ಗಾವಣೆ ಮಾಡಬಾರದೆನ್ನುವ ಕಂಡೀಷನ್ ಅನ್ನು ಕೊಟ್ಟಿದ್ದರೂ ಕೂಡ, ವರ್ಗಾವಣೆ ಮಾಡಿದ್ದಾರೆ, ಮಲೆನಾಡು ಪ್ರದೇಶದಲ್ಲಿ ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ, ಇದು ಆದಷ್ಟು ಶೀಘ್ರ ಇತ್ಯರ್ಥವಾಗಬೇಕು.

ಶ್ರೀ ಜಿ. ಕರುಣಾಕರ ರೆಡ್ಡಿ: ಖಂಡಿತ ಸಭೆ ಕರೆಯುತ್ತೇವೆ, ಮುಖ್ಯಮಂತ್ರಿಗಳು ಇದನ್ನು ಗಮನಿಸಿದ್ದಾರೆ, ಆದಷ್ಟು ಬೇಗ ನಾವು ಮಾತನಾಡುತ್ತೇವೆ.

ಶ್ರೀ ಎಸ್.ಆರ್.ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಅಲ್ಲಿಯವರೆಗೆ ಕ್ರಿಮಿನಲ್ ಕೇಸ್ ಹಾಕಿ ಒಕ್ಕಲೆಬ್ಬಿಸುವುದು ಬೇಡವೆಂದು ಹೇಳಿ.

ಅಧ್ಯಕ್ಷರು: ಅವರು ಮಾತನಾಡುತ್ತಾರೆ. ಗೋಪಾಲ ಭಂಡಾರಿಯವರು ಇಲ್ಲ, ಮುನಿಯಪ್ಪನವರು ಇಲ್ಲ, ಆರ್.ನರೇಂದ್ರರವರು ಇಲ್ಲ, ಈಶ್ವರ್ ಭೀಮಣ್ಣ ಖಂಡ್ರೆ ಇಲ್ಲ, ಶಿವಲಿಂಗೇ ಗೌಡರು ಇಲ್ಲ, ಸಂಪಂಗಿಯವರಿಗಿಲ್ಲ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 6.6.2011ರ 1ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 32 ಪ್ರಶ್ನೆಗಳ ಪೈಕಿ 22 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.